


ತಮ್ಮ ಸಾಮಾಜಿಕ ಬದುಕಿನ ಮಿಕ್ಕ ಸ್ಥಳಗಳಲ್ಲಿ ಇವರು ಬರುವುದಿಲ್ಲ ಎನ್ನುವುದು ಅವರಿಗೇ ಗೊತ್ತಿಲ್ಲದಂತೆ, ಅವರನ್ನೂ ನಿರಾಳವಾಗಿಸುತ್ತಿತ್ತು. ಅಲ್ಲಿರುವ ನಾಲ್ವರಲ್ಲಿ ಕಲ್ಯಾಣಿ ನಲವತ್ತರ ಅಂಚಿನಲ್ಲಿದ್ದಳು, ಆಕೆ ಒಬ್ಬ ಯಶಸ್ವಿ ಉದ್ಯಮಿ; ಐದು ವರ್ಷಗಳ ಹಿಂದೆ ಇದ್ದ ಒಳ್ಳೆಯ ಕೆಲಸ ಬಿಟ್ಟು ತನ್ನದೇ ಉದ್ಯಮ ಪ್ರಾರಂಭಿಸಿ, ಅದರಲ್ಲಿ ಯಶಸ್ವಿಯೂ ಆಗಿದ್ದಳು. ಖಾಸಗಿ ಬ್ಯಾಂಕ್ ಒಂದರಲ್ಲಿ ಮ್ಯಾನೇಜರ್ ಆಗಿದ್ದ ಮಧುವಂತಿ ಮತ್ತು ಒಡೆಸ್ಸಿ ನರ್ತಕಿ ಸಾವನಿ ಮೂವತ್ತೈದರ ಆಸುಪಾಸಿನಲ್ಲಿದ್ದರೆ, ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿದ್ದ ವಿಭಾವರಿ 24–25ರ ಹುಡುಗಿ. ‘ಡ್ಯಾನ್ಸ್ ಟು ಫಿಟ್ನೆಸ್’ ಎನ್ನುವ ಜಿಮ್‌ನಲ್ಲಿ ಈ ನಾಲ್ವರೂ ಬೆಳಗುಗಳಲ್ಲಿ ಮುಗುಳ್ನಗೆ, ಬೆವರು, ಬೆರಗು ಹಂಚಿಕೊಳ್ಳುವವರು. ‘ಹಾಯ್, ಹಲೋ’ಗಳು, ಸಕ್ಕರೆ ಇಲ್ಲದ ಕಾಫಿ, ಎನರ್ಜಿ ಡ್ರಿಂಕ್, ಸ್ಟೀಂ ಬಾತ್, ಜಕೂಸಿಯಲ್ಲಿ ಜೊತೆಯಾಗುವವರು. ಅದೊಂದು ಹೈಟೆಕ್ ಜಿಮ್. ಅಲ್ಲಿ ಬರುವ ಸುಮಾರು ಜನ ಕನ್ನಡ ಗೊತ್ತಿದ್ದರೂ ಶೋಕಿಗಾಗಿ ಅಥವಾ ತಾವು ಮಹಾನಗರದ ಮೆಟ್ರೊ ಸಂಸ್ಕೃತಿಯ ಪರಿಪಾಲಕರು ಎನ್ನುವ ಹೆಮ್ಮೆಗಾಗಿ ಇಂಗ್ಲಿಷ್ ಅಥವಾ ಹಿಂದಿಯನ್ನು ಬಳಸುತ್ತಿದ್ದರು. ಅದೇ ಕಾರಣಕ್ಕೋ ಏನೋ ಜಿಮ್ ಮೇಲ್ವಿಚಾರಕ ಸಹ ಝಣ ಝಣ ಎನ್ನುವ ಇಂಗ್ಲಿಷ್